‘ನಂದಲ್ಲ...! ನಿನ್ನದು... ಪಾಪೂನ ಹೆಸ್ರು ಇನ್ನು ಮುಂದೆ ‘ಇಂದ್ರಾ ಗಾಂಧಿ’...’

‘ಪಾಪೂ ಅಲ್ಲಾ...?’

‘ಅಲ್ಲ... ಇಂದ್ರ ಅಂತ ಆಗ್ಲೇ ಹೇಳದ್ನಲ್ಲವ್ವಾ... ನಿನ್ನ ಹೆಸ್ರು ಇಂದ್ರ ಗಾಂಧಿ.’

‘ನಿನ್ನ ಹೆಸ್ರು ಇಂದ್ರ ಗಾಂಧಿ.’

‘ನಂದಲ್ಲ...! ನಿನ್ನದು... ಪಾಪೂನ ಹೆಸ್ರು ಇನ್ನು ಮುಂದೆ ‘ಇಂದ್ರ ಗಾಂಧಿ’...’

‘ಪಾಪೂ ಅಲ್ಲಾ...?’

‘ಅಲ್ಲ... ಇಂದ್ರ ಗಾಂಧೀ... ಇನ್ನ ಮುಂದ ನಾನು ನಿನ್ನನ್ನ ಇಂದ್ರ ಗಾಂಧೀ ಅಂತ್ಲೇ ಕರೀತೇನಿ... ಇಕಾ ನೋಡು... ಯವ್ವಾ, ಇಂದ್ರ ಗಾಂಧೀ... ಅಲ್ನೋಡು ಆ ಕೆಂಪುದಾರನ ಪೆಟ್ಟಿಗೆ ಮೇಲೆ ಇಟ್ಟೇನಲ್ಲಾ. ಅದ್ನ ತಂದುಕೊಡವ್ವಾ’ ಪಾಪನ ಗಮನ ಮತ್ತೆಲ್ಲೊ ಹಾರಾಡುತ್ತಿತ್ತು. ಅವಳು ಗಂಗೆ ಮಾತಿಗೆ ಸ್ಪಂದಿಸಲೇ ಇಲ್ಲ.

‘ಏ... ಪಾಪೂ... ನಾ ಹೇಳಿದ್ದು ಕೇಳಸ್ಲಿಲ್ಲೇನಾ...? ಪೂಪೂ...’

ತಕ್ಷಣ ಪಾಪು ತಾಯನ್ನು ನೋಡಿದಳು. ಗಂಗೆಗೆ ನಗೂ ಬಂತು.

‘ನೋಡವ್ವಾ... ಆ ಕೆಂಪು ಬಣ್ಣದ ದಾರ ತಂದ್ ಕೊಡವ್ವಾ...’

ಪಾಪು ಸರ ಸರ ಹೋಗಿ ನೀಲಿ ಬಣ್ಣದದಾರ ಹಿಡಿದು ತಂದಳು! ಅವಳಿಗೆ ಕೆಂಪು ಯಾವುದು, ನೀಲಿ ಯಾವುದು ಎಂದು ಗೊತ್ತಾಗುತ್ತಿರಲಿಲ್ಲ. ಮತ್ತೆ ಗಂಗೆ ಟೀಚರ್ ಆದಳು.

‘ನೋಡವ್ವಾ ಇದು ನೀಲ... ಆಕಾಶದ ಹಾಂಗೆ ಬಣ್ಣ... ನೀಲ ಅಂದ್ರ ಈ ಬಣ್ಣ...’ ನಾ ಹೇಳಿದ್ದು ಕೆಂಪು... ಕೆಂಪು ಅಂದ್ರ ಕುಂಕುಮದ ಬಣ್ಣದ್ಹಾಂಗ ಇರಾದು... ಅಲ್ಲಿದೆ ನೋಡು... ಕೆಂಪು ಬಣ್ಣದ ದಾರ ಇದೆ... ಅದನ್ನು ತಾ...’

ಅವಳು ಓಡಿಹೋಗಿ ಕೆಂಪು ಬಣ್ಣದ ದಾರವನ್ನೇ ತಂದು, ತಾಯಿಯ ಶಹಭಾಷ್‌ಗಿರಿ ಪಡೆದಳು.

ಮುಂದೆ ಗಂಗೆ ಬಾಯಿ ತಪ್ಪಿಯೂ ‘ಪಾಪು’ ಅನ್ನಲಿಲ್ಲ. ಸದಾ ಮಗಳನ್ನು ‘ಇಂದ್ರಾ ಗಾಂಧೀ’ ಮಾಡಿಟ್ಟಳು. ಕೊನೆಗೂ ಪಾಪು ಇಂದ್ರಾ ಗಾಂಧೀ ಆಗಿ ತಾಯಿಗೆ ಸಮಾಧಾನ ತಂದಳು!

ತಿಂಗುರುಳಿದಂತೆ ಮಗಳನ್ನು ಜೊತೆಯಲ್ಲಿ ಕೆಲಸಕ್ಕೆ ಕರೆದುಕೊಂಡು ಹೋಗುವುದು ಕಷ್ಟವಾಗತೊಡಗಿತು. ಶಾಲೆಗೆ ಸೇರಿಸುವ ತನಕ ತನಗೆ ಬಿಡುಗಡೆ ಇಲ್ಲ ಎಂದುಕೊಂಡಳು ಗಂಗೆ. ‘ಪಾಪು’ ಹೆಸರಿನ ಅಡಚಣೆ ಯನ್ನೇನೊ ದಾಟಿಯಾಯಿತು. ಇನ್ನು ಶಾಲೆಗೆ ದಾಖಲಾಗುವಾಗ ತಂದೆ ಹೆಸರು ಕೊಡಬೇಕಾದ ದೊಡ್ಡ ಕಷ್ಟ ಅವಳು ಎದುರಿಸಲೇಬೇಕಿತ್ತು.

ಒಂಟಿ ತಾಯಿ ಹೆಜ್ಜೆ ಹೆಜ್ಜೆಗೂ ಹೊಡೆದಾಡುತ್ತಲೇ ಜೀವನ ಸಾಗಿಸುತ್ತಿದ್ದಳು.

ಆದರೂ ಛಲ ಬಿಡದ ಹೆಣ್ಣು; ತಾನಿಟ್ಟ ಹೆಜ್ಜೆ ದೃಢವಾಗಿಯೇ ಇಡುವಂತಹವಳು. ತನ್ನ ತಪ್ಪು ಏನೂ ಇಲ್ಲ ಎಂದೇ ನಂಬಿ ನುಗ್ಗುವವಳು. ಮುಂದೆ ಅವಳ ಜೀವನ ಸರಿಕೆ ಯಾವ ತಿರುವು ಪಡೆಯುತ್ತದೆಯೋ ಮುಂದೆ ನೋಡೋಣ.

6

ಎರಡು ಮೂರು ವರ್ಷಗಳಲ್ಲಿ ಶಿವಣ್ಣ ಮೈಸೂರಿನಲ್ಲಿ ಹೊಂದಿಕೊಂಡು ಬಿಟ್ಟ. ಕೆಲವರು ಅವನ ವೈದ್ಯದಲ್ಲಿ ನಂಬಿಕೆ ತಾಳಿದರು. ದೇವಸ್ಥಾನವಿದ್ದ ಬಡಾವಣೆಯಲ್ಲೇ ಒಂದು ಕೋಣೆ ಬಾಡಿಗೆಗೆ ತೆಗೆದುಕೊಂಡು, ಅಲ್ಲಿಯೇ ಔಷಧಿಗಳನ್ನು ತಂದಿಟ್ಟುಕೊಂಡು ವೃತ್ತಿಯನ್ನು ಮಾಡತೊಡಗಿದ. ದೇವಸ್ಥಾನಕ್ಕೆ ಹೆಚ್ಚಾಗಿ ಬಂದು ಹೋಗುತ್ತಿದ್ದರಿಂದ ಶೀನಯ್ಯ ಮತ್ತು ಪ್ರಸಾದನ ಬಳಿ ಬಳಕೆ ಹೆಚ್ಚಾಯಿತು. ಪ್ರಸಾದನ ಬಳಿ ತನಗೆ ದೇವಸ್ಥಾನದ ಕಮಿಟಿ ಸದಸ್ಯತ್ವ ಬೇಕೆಂದು ಹೇಳಿದ. ಪ್ರಸಾದ ತಾನು ಮೆಂಬರುಗಳಿಗೆ ಶಿಫಾರಸು ಮಾಡುತ್ತೇನೆಂದು ಭರವಸೆ ಕೊಟ್ಟ.

ಈ ನಡುವೆ ಒಮ್ಮೆ ತನ್ನ ಊರಿಗೂ ಹೋಗಿ ಬಂದ. ಅವನ ವಯಸ್ಸಾದ ಸೋದರಮಾವ ನಿಯತ್ತಿನಿಂದ ಹೊಲ ನೋಡಿಕೊಂಡಿದ್ದು ಸುಗ್ಗಿ ಹಣವನ್ನು ಕೋ ಆಪರೇಟಿವ್ ಬ್ಯಾಂಕಿನಲ್ಲಿ ಇಟ್ಟಿರುವುದಾಗಿ ಹೇಳಿ, ಒಮ್ಮೆ ಊರಿಗೆ ಬಂದು ಹೋಗೆಂದು ಬಲವಂತ ಮಾಡಿ ಪತ್ರ ಬರೆದಿದ್ದ. ಹೊಲದ ವ್ಯವಸ್ಥೆ ಸರಿಯಾಗಿ ಆಗಿದ್ದರೂ, ಅವನ ಮನೆಯಲ್ಲಿದ್ದ ನೆಂಟ ಹೆಂಗಸಿನ ಬಗ್ಗೆ ದೂರುಗಳನ್ನು ಹೇಳಿ ಬರೆದಿದ್ದರಿಂದ ಇವನು ಹೋಗಲೇಬೇಕಾಯಿತು. ಆ ಮುದುಕಿ ತನ್ನ ಬೇರು ಬೆಳೆಸಿ, ಹಟ್ಟಿಯ ತಳಪಾಯಕ್ಕೇ ಅಪಾಯ ತಂದಿಟ್ಟಿದ್ದಳು. ಅವಳನ್ನು ಕೇಳಲು ಯಾರು ಇರದ ಮನೆಗೆ ತನ್ನ ಗಂಡನಿಲ್ಲದ ಮಗಳನ್ನು ಮತ್ತು ಅವಳ ಎರಡು ಮಕ್ಕಳನ್ನು ತಂದಿಟ್ಟುಕೊಂಡು ಅಲ್ಲಿ ಹೆಗ್ಗಣವಾಗಿ ಬಿಟ್ಟಿದ್ದಳು.

ಶಿವಣ್ಣ ಈಗ ಒಬ್ಬನೇ ಆಗಿ ಬಂದದ್ದು ಮುದುಕಿಗೆ ಬಹಳ ಖುಷಿ ತಂದಿತು. ಮಗಳು ಪಾರೋತಿಯನ್ನು ಕರೆದು ಹೇಳಿದಳು.

‘ಶಿವ, ಒಬ್ಬಾನೇ ಬಂದಾನವ್ವಾ! ಅವ್ನ ಹೆಂಣ್ತಿ ಅಂಬೇ ಪಾತರಗಿತ್ತಿ ಇವ್ನ ಕೈಗೆ ಸಿಕ್ಕಿದ್ಹಾಂಗ ಕಾಣೂದಿಲ್ಲ...! ನೀನು ಈಗ ಅವನ್ನ ಬುಟ್ಟಾಗೆ ಹಾಕ್ಕೊಳ್ಳಕ್ಕ ಒಳ್ಳೆ ಅವಕಾಶ ಐತಿ... ಅವ್ನಿಗೆ ನೀರು ನೀಡಿ, ಊಟ ಚಹಾ ಎಲ್ಲ ನಿನ್ನ ಕೈಯಾರ ಕೊಟ್ಟು, ಅವನ್ನ ಸನಿಹ ಮಾಡ್ಕಾ...! ಪಟ್ಟಣ ಕಂಡು ಬಂದೋನು... ನೀನು ಒಪ್ಪ ವೈನ ಮಾಡ್ಕೊಳ್ಳಿಕೇ ಬೇಕಾಗ್ತೈತಿ... ನಗ್ ನಗ್ತಾ ಇರು... ನಾ ಏಳೋದನ್ನೆಲ್ಲಾ ನೆಪ್ಪಾಗಿಟ್ಕಾ... ಅಂವ ನಿನ್ನ ಉಡ್ಕಿ ಮಾಡಿಕೊಂಡು ಬಿಟ್ರೆ... ಮುಂದೆ ನಿನ್ನ ಕೂಸುಗೋಳು ಛಲೋ ಇರ್ತಾರಾ!...’

ಎರಡು ಮಕ್ಕಳಿದ್ದ ಪಾರೋತಿನೂ ಸಹ ಈ ಅವಕಾಶ ಬಿಡುವ ಹೆಂಗಸಲ್ಲ. ಇಷ್ಟು ದಿನ ಹಂದಿ ದೊಡ್ಡಿಯನ್ನಾಗಿಸಿದ್ದ ಮನೆಯನ್ನು ಸ್ವಚ್ಛ ಮಾಡಿಟ್ಟಳು. ತಾಯಿ ಬಿಸಿ ಬಿಸಿಯಾಗಿ ಮಾಡಿದ ರೊಟ್ಟಿ, ಪದಾರ್ಥಗಳನ್ನು ಬೆಳ್ಳಗೆ ಬೆಳಗಿದ ಕಂಚಿನ ತಟ್ಟೆ, ಬಟ್ಟಲುಗಳಲ್ಲಿ ತುಂಬಿಸಿ ಅವನಿಗೆ ನೀಡಲು ಬರುವಳು. ಆಗ ಮುದುಕಿ ಬಂದು ಕುಳಿತು ಉಪಚಾರ ಮಾಡಿ, ಊರ ಸಮಾಚಾರವನ್ನೆಲ್ಲಾ ಮಾತಾಡುವಳು. ಮೈಸೂರಿನ ಬಗ್ಗೆ ಕುತೂಹಲದ ಪ್ರಶ್ನೆಗಳನ್ನು ಹಾಕುವಳು. ಆದರೆ ಜಾಗ್ರತೆ ವಹಿಸಿ ಗಂಗೆ ಬಗ್ಗೆ ಏನೂ ಪ್ರಶ್ನೆ ಹಾಕುತ್ತಿರಲಿಲ್ಲ. ಮನೆ ಅಡಿಗೆ ಕಂಡು ಎಷ್ಟೋ ಕಾಲವಾಗಿದ್ದರಿಂದ ಶಿವಣ್ಣನ ನಾಲಿಗೆ ಹಳೇ ರುಚಿ ಕಂಡು ಚಪ್ಪರಿಸುತ್ತಿತ್ತು. ಮನೆಯನ್ನು ಚೆನ್ನಾಗಿಯೇ ನೋಡಿಕೊಂಡಿದ್ದದ್ದು ಸ್ಪಷ್ಟವೇ ಇತ್ತು. ಸೋದರಮಾವ ಏತಕ್ಕಾಗಿ ಪತ್ರದಲ್ಲಿ ಇವರ ಬಗ್ಗೆ ದೂರಿದನೊ ಅವನಿಗೆ ಅರ್ಥವಾಗಲಿಲ್ಲ.

‘ಹಟ್ಟಿ ಛಲೋದಾಗಿ ಇಟ್ಟಿದ್ದೀ ಕಾಕೀ... ಈ ರೊಟ್ಟಿ, ಈ ಪಲ್ಯ, ಈ ಚಟ್ನಿ ಪುಡಿಗಳು ಉಂಡು ಎಷ್ಟೋ ಕಾಲ ಆಯ್ತು ನೋಡಾ...’

‘ನಾವು ನಿನ್ನ ಮನೇಲಿ ಇದ್ದು ಇಷ್ಟೂ ಮಾಡದಿದ್ರೆ ಹ್ಯಾಂಗೆ ಹೇಳು ತಮ್ಮಾ... ನೀನಾದ್ರಾ ಸರ್ಯಾಗಿ ಊಟ ಇಲ್ದೆ ಎಷ್ಟು ಒಣ್ಗಿ ಹೋಗಿದ್ದೀಯಾ... ಊಟಕ್ಕೆ ಮೈಸೂರಲ್ಲಿ ಹ್ಯಾಂಗೆ ಮಾಡ್ತಿದ್ದೀ...’

‘ಹೋಟಲಲ್ಲಿ ತಿಂತಿದ್ದಿ... ಅಲ್ಲಿ ನಮ್ಮ ಕಡೆ ಊಟ ಸಿಗಾ ಹಂಗಿಲ್ಲ... ಅನ್ನ, ಸಾರು, ಹುಳಿ ಅಂತ ಏನೋ ಇರತ್ತೈತಿ...’

‘ಅಯ್ಯೊಪಾಪಾ!... ನೀನು ಮತ್ತೆ ಹೋಗ್ಬೇಡಾ ಕಂಡ್ಯಾ... ಇಲ್ಲೇ ಇದ್ಬುಡು... ಈ ಮನಿ ಬೆಳಗ್ಬೇಕು ನೋಡಪ್ಪಾ... ನೀ ಸುಖ ಕಾಣ್ಬೇಕು’ ಅವನು ನಗುತ್ತಾ...’

‘ನಾ ಇಲ್ಲಿ ಇರ್ಲಿಕ್ಕೆ ಬರ್ಲಿಲ್ಲ ಕಾಕೀ... ಸುಮ್ನೆ ಬಂದೀದೀನಿ ಅಷ್ಟೇಯಾ... ನಂಗೆ ಮೈಸೂರ್ನಾಗ ಬಾಳ ದಗ್ದ ಐತಿ... ನನ್ನ ನಾರು ಬೇರಿನ ಔಷಧ ಆ ಜನಕ್ಕೆ ಛಲೋದಾಗಿ ಹಿಡಸ್ತೈತಿ... ಛಲೊ ಸಂಪಾದ್ನೆ ಬರ್ಲಿಕ್ಕ ಹತ್ತೈತೆ...’ ಅವಳ ತಲೆಗೆ ಸೂಜಿ ಚುಚ್ಚಿದ ಹಾಗಾಗಿಬಿಟ್ಟಿತು, ಅವಳೆಂದಳು.

‘ಹಿರೀಕರು ಮನಿ, ಹೊಲ ಗದ್ದಿ ಅಂತ ನಿಂಗೆ ಮಾಡಿಟ್ಟು ಹೋಗ್ಯಾರೆ... ಸುಖವಾಗಿ ಇಲ್ಲಿರೋದು ಬಿಟ್ಟಾಕಿ, ಎಲ್ಲೋ ದೂರ ನೀನಾ ಊಟಕ್ಕೂ ಇಲ್ಲದ ಹಾಂಗ ಯಾಕೆ ಕಸ್ಟ ಬೀಳ್ಬೇಕು...? ಇದೆಲ್ಲಾ ಯಾಕ ಬೇಕಿತ್ತು ಶಿವಾ?... ಅದೆಲ್ಲಾ ಯಾನೂ ಬೇಡ... ಇಲ್ಲೇ ಇರಪ್ಪಾ.’

ಊಟ ಮಾಡಿದ ಅವನಿಗೆ ಬಿಕ್ಕಳಿಕೆ ಬಂತು. ಪಕ್ಕದಲ್ಲಿದ್ದ ತಂಬಿಗೆಯಿಂದ ನೀರನ್ನು ಗಟಗಟ ನೀರು ಸುರಿದುಕೊಂಡ.

‘ನಿಧಾನ ತಮ್ಮಾ... ನಿಧಾನದಲ್ಲಿ ಉಣ್ಣು...’ ಎಂದಳಾಕೆ. ಪಾರೋತಿಯನ್ನು ಕರೆದು ಮತ್ತೆ ತಂಬಿಗೆಯಲ್ಲಿ ನೀರು ತುಂಬಿ ತರುವಂತೆ ಹೇಳಿದಳು. ಅವಳು ನೀರು ತರಲು ಗಡಿಗೆ ಬಳಿ ಹೋದಾಗ ಮುದುಕಿ ಉಸುರಿದಳು.

‘ನಾನು ನಿನ್ನ ಹೆತ್ತ ತಾಯಿ ಇದ್ಹಂಗ ಅಂದ್ಕೋಪ... ನಾ ಹೀಂಗ ಅಂತೀನಿ ಅಂತ ಬೇಸ್ರ ಮಾಡ್ಕೋ ಬ್ಯಾಡ... ನಿಂಗೂ ವಯಸ್ಸಾಗ್ಲಿಕ್ಕೆ ಹತ್ತು.... ಇನ್ನು ಮುಂದಿನ ಚಿಂತೆನೂ ಮಾಡ್ಬೇಕಲ್ಲಾ... ಯಾರಾರಾ ನಿನ್ನ ನೋಡ್ಕೊಳಿಕೆ ಬೇಕಲ್ಲಾ... ನಿಂಗ್ಯಾರು ದಿಕ್ಕಾಗ್ತಾರಾ...?’

‘ಆದ್ಯಾಕ...? ಆ ದ್ಯಾವ್ರೇ ಇದಾನಲ್ಲ... ಅವ್ನಾ ನೋಡ್ಕೋತಾನಾ!.. ಯಾರೂ ಇಲ್ದಾರಿಗೆ ಅವ್ನೇ ಕೈಹಿಡೀತಾನ...!’

(ಸಶೇಷ)